ಅ) ಬೆಂಗಳೂರು ನಗರದಲ್ಲಿ ಈಗಾಗಲೇ ಹಲವಾರು ಸರ್ಕಾರಿ ನೌಕರರುಗಳು ಸರ್ಕಾರಿ ವಸತಿಗೃಹಗಳು ಇಲ್ಲದೆ ತೊಂದರೆ ಅನುಭವಿಸುತ್ತಿರುವುದರಿಂದ ಕಾಲಿ ಬೆಂಗಳೂರಿನಲ್ಲಿ ಇರುವ ಯಾವುದೇ ಸರ್ಕಾರಿ ವಸತಿಗೃಹಗಳನ್ನು ಮಾರಾಟ ಮಾಡುವ ಯಾವುದೇ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿರುವುದಿಲ್ಲ.

ಆ) (ಅ) ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಬೆಂಗಳೂರು ನಗರದಲ್ಲಿ ಸರ್ಕಾರಿ ಸಿಬ್ಬಂದಿಗೆ ವಸತಿಗೃಹಗಳ ಅಗಾಧ ಕೊರತೆ ಇರುವುದರಿಂದ ಸ್ವಾಯತ್ತ ಸಂಸ್ಥೆಗಳು ತೆಗೆದುಕೊಂಡಿರುವ ಕ್ರಮಗಳನ್ನು ಲೋಕೋಪಯೋಗಿ ಇಲಾಖೆಯ ಗಣನೆಗೆ ತೆಗೆದುಕೊಂಡಿಲ್ಲ.

ಈ) (ಇ) ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಸರ್ಕಾರದ ವಸತಿಗೃಹಗಳನ್ನು ಮಾರಾಟ ಮಾಡುವುದಿಲ್ಲ ಎಂಬ ನಿಲುವನ್ನು ಸರ್ಕಾರವು ತೆಗೆದುಕೊಂಡಿದೆ.

ಆಳ ಸಮುದ್ರದಲ್ಲಿ ವಿದೇಶಿ ಹಡಗುಗಳಲ್ಲಿ ಮೀನುಗಾರಿಕೆ.

660 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಮುದ್ರದಲ್ಲಿ ವಿದೇಶಿ ಹಡಗುಗಳು ಆಳ ಸಮುದ್ರದಲ್ಲಿಯೂ ಮೀನುಗಾರಿಕೆ ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿರ್ಧಾರವೇನು ?

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) 12(22 ಕಿ.ಮೀ.) ನಾಮಿಕ ಮೈಲು ಒಳಗಿನ ಪ್ರದೇಶದ ಮೀನುಗಾರಿಕೆ ವಿಷಯ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿರುತ್ತವೆ. 12 ನಾಮಿಕ ಮೈಲಿನ ನಂತರದ ಸಮುದ್ರ ಪ್ರದೇಶದ ಮೀನುಗಾರಿಕಾ ಕಾರ್ಯವ್ಯಾಪ್ತಿ ಕೇಂದ್ರದ ಸ್ವಾಧೀನಕ್ಕೆ ಬರುತ್ತದೆ. ಆಳ ಸಮುದ್ರ ಮೀನುಗಾರಿಕೆ ಅವಕಾಶವನ್ನು ರಾಜ್ಯದ ಕರಾವಳಿ ಮೀನುಗಾರರಿಗೆ ಮೀಸಲಿಡಬೇಕೆಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಒತ್ತಾಯ ತಂದಿದೆ.

ಬೇಲೆಕೇರಿ ಬಂದರಿನ ಹೂಳೆತ್ತುವ ಕೆಲಸ.

661 - ಶ್ರೀ ಕೆ. ವಿಶ್ವೇಶ್ವರ ಹೆಗ್ಡೆ (ಅಂಕೋಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಂಕೋಲಾ ತಾಲ್ಲೂಕಿನಲ್ಲಿ ಬೇಲಿಕೇರಿ ಬಂದರಿನ ಹೂಳೆತ್ತುವ ಕೆಲಸ ಯಾವ ಹಂತದಲ್ಲಿದೆ ?

ಅ) 1994-95ರಲ್ಲಿ ವಿಲೇವಾರಿದ ಹಣವೆಷ್ಟು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಇಲ್ಲಿ ಜಟ್ಟಿ ನಿರ್ಮಿಸುವ ಮತ್ತು ಹೂಳು ತೆಗೆಯುವ ಪ್ರಸ್ತಾವನೆ ಮಂಜೂರಾತಿಗಾಗಿ ಭಾರತ ಸರ್ಕಾರಕ್ಕೆ ಕಳುಹಿಸಿದೆ. ಇನ್ನು ಮಂಜೂರಾತಿ ಬರಕಿಲ್ಲ.

ಆ) ಉದ್ಭವಿಸುವುದಿಲ್ಲ.

ಎನ್.ಸಿ.ಡಿ.ಸಿ.ಯಿಂದ ಮೀನುಗಾರರ ಅಭಿವೃದ್ಧಿಗೆ ಹಣ.

665 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ, ಅಭಿವೃದ್ಧಿ ನಿಗಮ (ಎನ್.ಸಿ.ಡಿ.ಸಿ.) ಮೀನುಗಾರರ ಅಭಿವೃದ್ಧಿಗಾಗಿ ಎಷ್ಟು ಹಣ ಮಂಜೂರಾಗಿದೆ. ಈ ವರೆಗೆ ಎಷ್ಟು ಹಣ ಪಡೆಯಲಾಗಿದೆ?

ಆ) ಈ ಹಣವನ್ನು ಯಾವ ಉದ್ದೇಶಕ್ಕೆ ಪಡೆಯಲಾಗಿದ. ಮತ್ತು ಎಲ್ಲೆಲ್ಲಿ ಈ ಹಣವನ್ನು ವಿಲೇ ಮಾಡಲಾಗಿದೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ 1974-75ನೇ ಸಾಲಿನಿಂದಿವ ಇಲ್ಲಿಯವರೆಗೆ ರೂ. 562.74 ಲಕ್ಷ ಘಟಕ ಯೋಜನೆಯುಳ್ಳ ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ ರೂ. 396.61 ಲಕ್ಷ ಸಾಲ, 58.25 ಲಕ್ಷ ಸಹಾಯಧನವಿದ್ದು ಒಟ್ಟು ರೂ. 454.86 ಲಕ್ಷ ಮಂಜೂರು ಮಾಡಿರುತ್ತದೆ ಉಳಿದ ರೂ. 107.88 ಲಕ್ಷ ಮೊತ್ತವನ್ನು ರಾಜ್ಯ ಸರ್ಕಾರ ಹಾಗೂ ಸಹಕಾರ ಸಂಘಗಳು ಭರಿಸಬೇಕಾಗಿರುತ್ತದೆ. ಒಟ್ಟು ಮಂಜೂರಾಗಿರುವ 454.86 ಲಕ್ಷ ಮೊತ್ತದಲ್ಲಿ ಈವರೆವಿಗೆ 110.01 ಲಕ್ಷ ಪಡೆಯಲಾಗಿದ್ದು. ಉಳಿದ ರೂ. 344.87 ಲಕ್ಷ ರಾಜ್ಯ ಸರ್ಕಾರದಿಂದ ವಿವಿಧ ಸಂಸ್ಥಗಳಿಗೆ ಹಣ ಬಿಡುಗಡೆ ಮಾಡಿ ವಿಲೇ ಮಾಡಿದ ನಂತರ ಎನ್.ಸಿ.ಡಿ.ಸಿ.ಯಿಂದ ಪುನರ್ ಧನವನ್ನು ಪಡೆಯಬೇಕಾಗಿರುತ್ತದೆ.

ಆ) ಈ ಹಣವನ್ನು ಮೀನುಗಾರರು ಮೀನು ಹಿಡಿಯುವ ಸಲಕರಣೆಗಳನ್ನು ಇಂಧನ ವಾಹನವನ್ನು, ದೋಣಿ ಮತ್ತು ಬಲೆಗಳನ್ನು ಕೊಳ್ಳಲು, ಗೋದಾಮುಗಳನ್ನು ಕಟ್ಟಲು, ಶೀಥಲೀಕರಿಸಲು ಪ್ಲೇಟ್ ಫ್ರೀಜರ್‌ಗಳನ್ನು ಕೊಳ್ಳಲು (ದುರಸ್ತಿ ಸೇವಾ ಕೇಂದ್ರಗಳಿಗೆ) ಮೀನು ಹದಗೊಳಿಸುವ ಸಲಕರಣೆಗಳನ್ನು ಕೊಳ್ಳಲು ಕೊಡಲಾಗಿದೆ. ಪರ್ಸೀನ್ ದೋಣಿ ಕೊಳ್ಳಲು, ವಾಹನ ಕೊಳ್ಳಲು, ಔಟ್ ಬೋರ್ಡ್ ಇಂಜಿನ್‌ಗಳನ್ನು ಕೊಳ್ಳಲು, ಮಿನಿ ಬಸ್‌ಗಳನ್ನು ಕೊಳ್ಳಲು, ಪ್ರಾಥಮಿಕ ಸಹಕಾರ